**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.</u>**

**ಅಸಲು ದಾವಾ ಸಂಖ್ಯೆ.231/2017 ದಿನಾಂಕ:18-9-2024**

**ಪಿ.ಡಬ್ಲ್ಯೂ:1**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿಯ ಪರ ಶ್ರೀ ಆರ್ ಕೆ ವಕೀಲರಿಂದ</u>**

30. ನಿಪಿ-10 ರ ವಿಭಾಗಪತ್ರದ ಕರಡಿನಲ್ಲಿ ಇರುವ ಯಾವ ಯಾವ ಆಸ್ತಿಗಳು ನಿಪಿ-8 ಮತ್ತು 9 ರ ವಿಭಾಗಪತ್ರಗಳಲ್ಲಿ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ-10 ರ ಕರಡಿನಲ್ಲಿ ಪಿತ್ರಾರ್ಜಿತವಾದ ಆಸ್ತಿಗಳು, ತಾಯಿಯ ಆಸ್ತಿಗಳು ಮತ್ತು 2 ನೇ ಪ್ರತಿವಾದಿಯ ಆಸ್ತಿಗಳು ಮತ್ತು ಅಜ್ಜಿಯ ಆಸ್ತಿಗಳು ಯಾವುವು ಎಂದು ನಮೂದು ಮಾಡಿರುವುದಿಲ್ಲ. 2 ನೇ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯನ್ನು ನಿಪಿ-10 ರ ಕರಡು ಪ್ರತಿಯಲ್ಲಿ ಸೇರಿಸಲಾಗಿದೆ. ನಿಪಿ-10 ರ ಕರಡಿನಲ್ಲಿ ಕೊಡಿಗೆ ಹೊಲ ಎಂದು ಬರೆದಿದ್ದು ಅದರ ಸರ್ವೇ ನಂಬರ್ ಮತ್ತು ಚಕ್ಕುಬಂದಿ ನಮೂದಿಸಿರುವುದಿಲ್ಲ. ನಿಪಿ-8 ಮತ್ತು 9 ರಲ್ಲಿ ಕೊಡಿಗೆ ಹೊಲ ಎಂದು ಬರೆದಿರುವುದಿಲ್ಲ. ಸಾಕ್ಷಿ ಸರ್ವೇ ನಂಬರ್ ಮತ್ತು ಚಕ್ಕುಬಂದಿ ಬರೆದಿದೆ ಎಂದು ಸ್ವತಃ ನುಡಿಯುತ್ತಾರೆ.

31. 2 ನೇ ಪ್ರತಿವಾದಿಯು ನಾಮಕಾವಸ್ತೆ ಕ್ರಯಪತ್ರ ಬರೆದುಕೊಂಡಿರುತ್ತಾರೆ ಎಂದು ನಾನು ಹೇಳಿದ್ದು ಸದರಿ ಕ್ರಯಪತ್ರದಲ್ಲಿ ಕೊಡಿಗೆ ಹೊಲ ಎಂದುನಮೂದು ಮಾಡಿರುವುದಿಲ್ಲ. ನಿಪಿ-10 ರ ಕರಡಿನಲ್ಲಿ ಯಾವ ನಮೂನೆಯ ಜಮೀನು ಮತ್ತು ಅದರ ವಿಸ್ತೀರ್ಣವನ್ನು ಬರೆದಿರುವುದಿಲ್ಲ. ನಿಪಿ-10 ರ ಕರಡನ್ನು ಮೊದಲು ತಯಾರಿಸಿ ನಂತರ ನಿಪಿ-8 ಮತ್ತು 9 ರ ವಿಭಾಗಪತ್ರ ಬರೆಳಚ್ಚು ಮಾಡಿಸಲಾಯಿತು. ನಿಪಿ-10 ರಲ್ಲಿರುವ ಒಕ್ಕಣೆಗಳು ನಿಪಿ-8 ರಲ್ಲಿ ಇರದ ಕಾರಣ ನಿಪಿ-10 ನ್ನು ಮೊದಲೇ ತಯಾರಿಸಿದ್ದೆವು ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಕೊಡಿಗೆ ಹೊಲ ಬರೆದಿರುವ ಸ್ಥಳದಲ್ಲಿ ಅದು 2 ನೇ ಪ್ರತಿವಾದಿಯೇ ನಾಮಕಾವಸ್ತೆ ಕ್ರಯದಿಂದ ಬಂದ ಆಸ್ತಿ ಎಂದು ಬರೆದಿರುತ್ತದೆ.

32. ನಿಪಿ-8,9 ಮತ್ತು 10 ರ ದಾಖಲೆಗಳನ್ನು ನಾನು ಸೃಷ್ಠಿಮಾಡಿರುವ ಕಾರಣ ಅವು ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ 2 ನೇ ಪ್ರತಿವಾದಿ ಹೆಸರಿಗೆ ಆಕೆಗೆ ಮಕ್ಕಳು ಇರದ ಕಾರಣ ನಾಮಕಾವಸ್ತೆ ಕ್ರಯಪತ್ರನ್ನು ದಿನಾಂಕ 6-5-1980 ರಂದು ಮಾಡಲಾಗಿದೆ ಎಂದು ಬರೆದಿದೆ. 1 ನೇ ಪ್ರತಿವಾದಿ ನೀಡಿದ ನೋಟೀಸ್ ಗೆ ಪ್ರತಿಯಾಗಿ ನಾನು ನೀಡಿದ ಮರು ಉತ್ತರ ನೋಟೀಸ್ ನಲ್ಲಿ ಸದರಿ ವಿಷಯವನ್ನು ತಿಳಿಸಿರುತ್ತೇನೆ. ಈ ಎಲ್ಲಾ ವಿಷಯವನ್ನು ವಕೀಲರಿಗೆ ತಿಳಿಸಿ ಮರು ಉತ್ತರ ನೋಟೀಸ್ ನೀಡಿಸಿರುತ್ತೇನೆ. ಸದರಿ ನೋಟೀಸ್ ನಿಪಿ-7 ಎಂದು ಗುರುತಿಸಲಾಗಿದ್ದು ಸಾಕ್ಷಿ ತನಗೆ ಈಗ ಸದರಿ ನೋಟೀಸನ್ನು ಓದಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದ 2 ನೇ ಪ್ಯಾರಾದಲ್ಲಿ ಇರುವ ಸಂಗತಿಗಳನ್ನು ನಾನು ನಿಪಿ-7 ರ ನನ್ನ ಜವಾಬು ನೋಟೀಸ್ ನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾದಪತ್ರದ 2 ನೇ ಪ್ಯಾರಾದಲ್ಲಿ ಇರುವ ಸಂಗತಿಗಳನ್ನು ದುರುದ್ದೇಶದಿಂದ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

33. ನಿಪಿ-7 ರ ನೋಟೀಸ್ ನೀಡಿದ ನಂತರ ಮತ್ತು ದಾವಾ ಹಾಕುವ ಮೊದಲು ಸದರಿ ಸಂಗತಿಗಳನ್ನು ನಾನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಪಹಣಿ ಪತ್ರಿಕೆಗಳನ್ನು ನೋಡಿ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಎಲ್ಲಾ ಜಮೀನುಗಳನ್ನು ಉಳುಮೆ ಮಾಡಿ ನೋಡಿಕೊಳ್ಳುತ್ತಿದ್ದೀರಾ ಎಂದರೆ ಸಾಕ್ಷಿಯು ನಾನು ಉಳುಮೆ ಮಾಡುತ್ತಿರುವ ಜಮೀನುಗಳ ಬಗ್ಗೆ ನನಗೆ ತಿಳಿದಿದೆ ಎಂದು ಉತ್ತರಿಸುತ್ತಾರೆ. ಯಾವ ಯಾವ ಜಮೀನುಗಳು ಮತ್ತು ಅದರ ಸರ್ವೇ ನಂಬರ್‌ಗಳು ತಿಳಿದಿರುತ್ತದೆ ಎಂದರೆ

ಸಾಕ್ಷಿಯು ಕೆಲವೊಂದು ಗೊತ್ತು ಕೆಲವೊಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

34. ದಾವಾ ಆಸ್ತಿ ಸರ್ವೆ ನಂ.15, ಇದು ದಾವೆ ದಾಖಲಿಸಿದ ಸಮಯದಲ್ಲಿ ತಿಳಿದಿದೆ. ಓ ಎಸ್ ನಂ.9/2016 ರಲ್ಲಿ ನಾನು ಪಕ್ಷಗಾರನಾಗಿದ್ದು ದಾವೆ ನಡೆವಳಿಯಲ್ಲಿ ಹಾಜರಾಗಿದ್ದೆನು. ಸದರಿ ದಾವೆಯಲ್ಲಿ ಮತ್ತು ಈ ದಾವೆಯಲ್ಲಿ ನಾನು ಒಬ್ಬರೇ ವಕೀಲರನ್ನು ನೇಮಕಮಾಡಿಕೊಂಡಿರುತ್ತೇನೆ ಎಂದರೆ ಸರಿ. ವಾದ ಪತ್ರದ 2 ನೇ ಪ್ಯಾರಾದಲ್ಲಿ ಇರುವ ಸಂಗತಿಗಳನ್ನು ಈ ಮೊದಲು ನಾನು ಎಲ್ಲಿಯೂ ತಿಳಿಸದೇ ದುರುದ್ದೇಶದಿಂದ ಈ ದಾವೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸುಳ್ಳು. ದಿನಾಂಕ 6-5-1980 ರಂದು 2 ನೇ ಪ್ರತಿವಾದಿ ಹೆಸರಿಗೆ ಆದ ಕ್ರಯಪತ್ರದಲ್ಲಿ ಸದರಿ ಕ್ರಯಪತ್ರವನ್ನು ಆಕೆಯ ಹೆಸರಿಗೆ ನಾಮಕಾವಸ್ತೆ ಎಂದು ನಮೂದು ಮಾಡಲಾಗಿದೆಯೇ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 6-5-1980 ರ ಕ್ರಯಪತ್ರವನ್ನು ನಾನು ದಾವಾ ಹೂಡುವ ಮೊದಲು ಓದಿ ನೋಡಿ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ದಿನಾಂಕ 6-5-1980 ರಂದು 2 ನೇ ಪ್ರತಿವಾದಿ ಹೆಸರಿಗೆ ಯಾವುದೇ ಕ್ರಯಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 6-5-1980 ರಂದು 2 ನೇ ಪ್ರತಿವಾದಿಗೆ ಮಕ್ಕಳು ಇರದ ಕಾರಣ ಆಕೆಯ ಹೆಸರಿಗೆ ನಾಮಕಾವಸ್ತೆ ಕ್ರಯಪತ್ರ ಮಾಡಿಸಲಾಗಿತ್ತು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

35. ದಿನಾಂಕ 6-5-1980 ರಂದು 2 ನೇ ಪ್ರತಿವಾದಿ ಹೆಸರಿಗೆ ಯಾರಿಂದ ಕ್ರಯಪತ್ರ ಆಗಿರುತ್ತದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ. ಸದರಿ ಕ್ರಯಪತ್ರವನ್ನು ಹೊಳಿಯಪ್ಪ ರವರು ಬರೆದುಕೊಟ್ಟಿರುತ್ತಾರೆ. ಸದರಿ ಹೊಳಿಯಪ್ಪ ನನ್ನ ಅಜ್ಜಿಯ ಅಣ್ಣ ಮತ್ತು 2 ನೇ ಪ್ರತಿವಾದಿಯ ಮಾವ. ದಿನಾಂಕ 6-5-1980 ರಂದು ಹೊಳಿಯಪ್ಪ ರವರು 2 ನೇ ಪ್ರತಿವಾದಿ ಹೆಸರಿಗೆ ಯಾವುದೇ ಕ್ರಯಪತ್ರ ಬರೆದುಕೊಡದಿದ್ದರೂ ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ವಿಷಯ ನಮ್ಮ ಅಜ್ಜಿಯ ತವರು ಮನೆಯ ಕುಟುಂಬದವರಿಗೆ ತಿಳಿದಿರುತ್ತದೆ. ಹೊಳಿಯಪ್ಪನ ವಂಶಸ್ಥರು ಅಂದರೆ ನಮ್ಮ ಅಜ್ಜಿಯ ತವರು ಮನೆಯವರು ಈಗ ಯಾರೂ ಇರುವುದಿಲ್ಲ. ಅವರ ವಾರಸುದಾರರು ಇದ್ದು ಅವರು ವಿವರ ಹೇಳಲು ಬರುವುದಿಲ್ಲ. ನನಗೆ ಎಲ್ಲರ ಮಾಹಿತಿ ತಿಳಿದಿದ್ದರೂ ತಿಳಿದಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಅವರ ಕುಟುಂಬದ ನಡುವೆ ಯಾವುದೇ ವೈಷಮ್ಯ ಇರುವುದಿಲ್ಲ.

36. ವಾದಪತ್ರದಲ್ಲಿ ಇರುವ ವಿಷಯಗಳು ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಪತ್ರದ 3 ನೇ ಪುಟದ 4 ನೇ ಪ್ಯಾರಾದ ಕೊನೆಯಲ್ಲಿ ಈ ದಾವೆಯ ದಾವಾ ಸ್ವತ್ತನ್ನು ಓ ಎಸ್ ನಂ.9/2016 ರ ದಾವೆಯಲ್ಲಿ 3 ನೇ ಅನುಸೂಚಿ ಸ್ವತ್ತು ಎಂದು ಸೇರ್ಪಡೆಯಾಗಿತ್ತು ಎಂದು ಬರೆದಿರುತ್ತೀರಾ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿಯರು ಹಾಜರುಮಾಡಿರುವ ದಾಖಲೆಗಳ ಬಗ್ಗೆ ನಾನು ವಕೀಲರಿಂದ ತಿಳಿದುಕೊಂಡಿರುತ್ತೇನೆ.

37. ದಾವಾ ಸ್ವತ್ತು ಸರ್ವೆ ನಂ.15/2 ಬಿ ಇದರ ಹಿಸ್ಸಾ ಟಿಪ್ಪಣಿ, ಆಕಾರ್ ಬಂದ್ ಪಹಣಿ ಪತ್ರಿಕೆಯ ದಾಖಲೆಗಳಲ್ಲಿ 2 ನೇ ಪ್ರತಿವಾದಿಗೆ 1 ಹೆಕ್ಟರ್ 14 ಸೆಂಟ್ಸ್ ಇರುತ್ತದೆ ಎಂದರೆ ಸರಿ. ನಿಪಿ-3 ರಂತೆ 2016-17 ನೇ ಇಸವಿಯಲ್ಲಿ ದಾವಾ ಸ್ವತ್ತು 2 ಎಕರೆ 31 ಗುಂಟೆ 2 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ. ನಿಪಿ-3 ನ್ನು ದಿನಾಂಕ 5-6-2017 ರಂದು, ನಿಪಿ-4 ರ ಪಹಣಿ ಪತ್ರಿಕೆಯನ್ನು ದಿ.3-6-2017 ರಂದು ಪಡೆದಿರುತ್ತೇನೆ. 2 ನೇ ಪ್ರತಿವಾದಿ ಹೆಸರಿನಲ್ಲಿ ಇರುವ 2016-17 ನೇ ಸಾಲಿಗಿಂತ ಮೊದಲಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಿಡಿ-3 ರ ದಾನಪತ್ರವನ್ನು ಹೊರುತಪಡಿಸಿ 2 ನೇ ಪ್ರತಿವಾದಿ ಹೆಸರಿಗೆ ಬೇರೆ ಯಾವುದೇ ದಾಖಲೆಗಳಾಗಿರುವುದಿಲ್ಲ ಎಂದರೆ ಸರಿ. ನಿಡಿ-3 ರಲ್ಲಿ 2 ನೇ ಪ್ರತಿವಾದಿಗೆ ಮಕ್ಕಳಾಗದ ಕಾರಣ ದಾನಪತ್ರವನ್ನು ನಾಮಕಾವಸ್ತೆಯಾಗಿ ಬರೆದುಕೊಟ್ಟಿದೆ ಎಂದುಬರೆದಿರುವುದಿಲ್ಲ. ನಿಡಿ-3 ರಲ್ಲಿ

ದಾವಾ ಸ್ವತ್ತನ್ನು 2 ನೇ ಪ್ರತಿವಾದಿಗೆ ಅರಿಶಿಣ ಕುಂಕುಮ ಎಂದು ನಿರ್ಧಿಷ್ಟವಾಗಿ ಬರೆದು ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ನಮಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಹಾಜರುಮಾಡಿರುವುದಿಲ್ಲ ಎಂದರೆ ದಾಖಲೆಗಳು ಇರುವುದಿಲ್ಲ.

38. 2 ನೇ ಪ್ರತಿವಾದಿಗೆ ದಾವಾ ಆಸ್ತಿ ಸ್ತ್ರೀ ಧನದ ಮೂಲಕ ಬಂದ ಕಾರಣ ಆಕೆ ತನ್ನ ಸ್ವಂತ ಹಕ್ಕಿನ ಮೇಲೆ 3 ನೇ ಪ್ರತಿವಾದಿಗೆ ದಿನಾಂಕ 4-4-2017 ರಂದು ನೊಂದಾಯಿತ ದಾನಪತ್ರದ ಮೂಲಕ ನೀಡಿರುವ ಕಾರಣ ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರಗಳಿಗೆ ನಾನು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಓ ಎಸ್ ನಂ.9/2016 ರಲ್ಲಿ ಆದ ಆದೇಶ ಮತ್ತು ಮಾನ್ಯ ಜಿಲ್ಲಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ನನ್ನ ಅಕ್ಕ, ಅಜ್ಜಿ, 1 ನೇ ಪ್ರತಿವಾದಿ ಮಾನ್ಯ ಉಚ್ಛನ್ಯಾಯಾಲಯದಲ್ಲಿ 2 ನೇ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯ ಮೌಲ್ಯ ನನಗೆ ಗೊತ್ತಿಲ್ಲ. ನಿಡಿ-3 ರ ದಾನಪತ್ರವನ್ನು ನಾನು ಈ ಮೊದಲು ಯಾವುದೇ ಪ್ರಕರಣದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡು 2 ಮತ್ತು 3 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

39. 1 ನೇ ಪ್ರತಿವಾದಿಗೆ 4 ಜನ ಮಕ್ಕಳು ಅವರ ಹೆಸರು 3 ನೇ ಪ್ರತಿವಾದಿ, ನಟರಾಜ, ಮಮತ ಮತ್ತು ಕೇಶವ. ಪ್ರಸ್ತುತ ಸದರಿ 3 ಜನ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಟರಾಜರವರು ಮರಣ ಹೊಂದಿರುತ್ತಾರೆ. ನಟರಾಜ ಮರಣ ಹೊಂದಿ ಎಷ್ಟು ವರ್ಷ ಆಗಿರುತ್ತದೆ ಎಂದು

ನನಗೆ ಗೊತ್ತಿಲ್ಲ. ನಟರಾಜ ಮರಣ ಹೊಂದಿದ ನಂತರ 1 ನೇ ಪ್ರತಿವಾದಿಗೆ ಹೆಣ್ಣು ಮಕ್ಕಳು ಉಳಿದಿರುತ್ತಾರೆ ಎಂದರೆ ಇರಬಹುದು. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದು ಹಲವು ಖಾಯಿಲೆಗಳು ಇರುತ್ತವೆ ಎಂದರೆ ಇರಬಹುದು. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದು ಆತನ ಹೆಣ್ಣು ಮಕ್ಕಳು ಜೊತೆಯಲ್ಲಿ ಇರದ ಬಗ್ಗೆ ನಾನು ಮನಗಂಡು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶ ಹೊಂದಿರುತ್ತೇನೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**